ಶ್ರೀ ಅಜೀಜ್ ಸೇಟ್.—ಬಾಗೇವಾಡಿಯಲ್ಲಿ ಡಿಸೈನ್ ಸ್ವಲ್ಪ ಚೇಂಜ್ ಆಗಿರುವುದರಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ತಡವಾಯಿತು. ಈಗ ಅದರ ಎಸ್ಟಿಮೇಟ್ 1 ಲಕ್ಷ 99 ಸಾವಿರ ರೂಪಾಯಿ ಆಗಿದೆ. ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಜಳ್ಳಿಯ ಕೆಲಸಕ್ಕೆ ಟೆಂಡರರ್ಸ್ ಬರದೇ ಇರುವ ಕಾರಣ ತಡವಾಗಿದೆ. ಎಸ್ಟಿಮೇಟ್ಸ್ ಚೇಂಜ್ ಮಾಡಿ ರೀಟೆಂಡರ್ ಮಾಡಬೇಕೆಂದು ಮಾಡಿದ್ದೇವೆ. ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎರ್. ಕಬಾಡಿ.—ಬಸ್‌ಸ್ಯಾಂಡ್ ಕಟ್ಟುವ ಕಾರ್ಯಕ್ರಮವನ್ನು ಯಾವ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಇಲ್ಲಿ ಅವರು ಕೇಳಿರತಕ್ಕದ್ದು ಬಾಗೇವಾಡಿ ಮತ್ತು ಜಳ್ಳಿಗೆ ಸಂಬಂಧಪಟ್ಟದ್ದು. ಹಿಂದೆ ಇದಕ್ಕೆ ಪೌಂಡೇಷನ್ ಹಾಕಿದ್ದರೂ ಏತಕ್ಕೆ ಈ ಕೆಲಸ ಇನ್ನೂ ತೆಗೆದುಕೊಳ್ಳಲಿಲ್ಲ ಎಂದು ಕೇಳಿದರು. ನಾನು ಟ್ರಾನ್ಸ್‌ಪೋರ್ಟ್ ಮತ್ತು ಲೇಬರ್ ಮಿನಿಷ್ಟರ್ ಆಗಿದ್ದಾಗ ಇದರ ಪೌಂಡೇಷನ್ ಹಾಕಿದ್ದು ನಿಜ. ಅದಾದ ಕೆಲವು ವರ್ಷಗಳಲ್ಲಿ ಆ ಖಾತೆ ಬಿಟ್ಟಿದ್ದರಿಂದ ಅದು ಹಾಗೇ ಉಳಿದು ಹೋಯಿತು. ಈಗ 7 ವರ್ಷಗಳು ಆಗಿರುವುದರಿಂದ ಹಿಂದೆ 1,25,000 ಸಾವಿರ ಚಿಲ್ಲರೆ ರೂಪಾಯಿಗಳಿಗೆ ಆಗಿರುವ ಎಸ್ಟಿಮೇಟ್ ಪ್ರಕಾರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈಗ ರಿವೈಸ್ಡ್ ಎಸ್ಟಿಮೇಟ್ಸ್ ಮಾಡಬೇಕು ಎಂದು ಹೇಳಿದ್ದೇವೆ. ರಿವೈಸ್ಡ್ ಎಸ್ಟಿಮೇಟ್ ಮಾಡಿಸಿ ಕೆಲಸ ತೆಗೆದು ಕೊಳ್ಳುತ್ತೇವೆ. ಇನ್ನೊಂದು ಕಾರಣ, ಬಹುಶಃ ಎಂ.ಎಸ್. ಆರ್.ಟಿ.ಸಿ. ಯಲ್ಲಿ ನಾಕಷ್ಟು ಫಂಡ್ಸ್ ಇರಲಿಲ್ಲವೆಂದು ಕಾಣುತ್ತದೆ. ತಾವು ಹೇಳಿರತಕ್ಕ ಕೆಲಸದ ಜೊತೆಗೆ ಇನ್ನು ಕೆಲವು ಬಸ್ ಸ್ಟ್ಯಾಂಡ್ ಮಾಡಬೇಕಾದ ಕೆಲಸ ಹಾಗೆ ನಿಂತು ಹೋಗಿದೆ. ಫಂಡ್ಸ್ ಒದಗಿಸಿಕೊಂಡು ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎರ್. ಕಬಾಡಿ.—ಹಿಂದೆ ಫೌಂಡೇಷನ್ ಸ್ಟೋನ್ ತಾವು ಹಾಕಿದಾಗ ಗೆಸ್ಟ್ ಹೌಸ್ ಪ್ರೊವೈಡ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಅದೇ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಜನತೆ ದೃಷ್ಟಿಯಿಂದ ಮತ್ತು ಸಾರಿಗೆ ಸಂಪರ್ಕ ಜಾಸ್ತಿಯಾಗುವ ದೃಷ್ಟಿಯಿಂದ ಆಶ್ವಾಸನೆ ಕೊಡುತ್ತಾರೆಯೇ ?

Sri D. DEVARAJ URS.—We will take up Bus stand. The guest house is another matter.

Construction of Building at the Bus Stand at Devarahippargi

90. Sri S. Y. PATIL (Sindagi).—

Will the Minister for Labour be pleased to state:—

(*a*) whether it has come to the notice of the Government that there is necessity of a building at the bus stand at Devarahippargi, Sindagi Taluk, Bijapur District.

(*b*) if so, whether plans and estimates have been prepared for the same ;

(*c*) if so, whether sanction has been accorded to them ?

Sri AZEEZ SAIT (Minister for Labour).—

(*a*) Yes.

(*b*) No.

(*c*) No.

ಶ್ರೀ ಎಸ್. ಮೈ. ಪಾಟೀಲ್.—'ಆ' ಪ್ರಶ್ನೆಗೆ ಉತ್ತರವಾಗಿ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿಲ್ಲ ಎಂದು ಹೇಳಿದ್ದಾರೆ. ಇದು ಬಳ್ಳಾರಿ, ಸೋಲಾಪುರ ಅಲ್ಲದೆ ಗುಲ್ಬರ್ಗ, ವಿಜಾಪುರ ಮತ್ತು ಹುಬ್ಬಳ್ಳಿಗಳಿಗೆ ಮಧ್ಯೆ ಸ್ಥಳವಾಗಿರುವುದರಿಂದ ಎಸ್ಟಿಮೇಟ್ಸ್ ಮತ್ತು ನಕ್ಷೆ ತಯಾರು ಮಾಡಿಸಿ ಸರ್ಕಾರದವರು ಕಟ್ಟಡಕ್ಕೆ ತ್ವರಿತವಾಗಿ ಮಂಜೂರಾತಿ ಕೊಡುತ್ತೀರಾ ?

†ಶ್ರೀ ಅಜೀಜ್ ಸೇಟ್.—ಟೆಂಡರು ಕಾಲ್‌ಫಾರ್ ಮಾಡಿದೆ. ಯಾರೂ ಮುಂದೆ ಬರಲಿಲ್ಲ. ರಿವೈಸ್ಡ್ ಎಸ್ಟಿಮೇಟ್ ಮಾಡಿ ರೀಟೆಂಡರ್ ಕಾಲ್‌ಫಾರ್ ಮಾಡಿದ್ದೇವೆ. ಅದು ಬಂದ ತಕ್ಷಣ ಈ ಕೆಲಸ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಈ ಪ್ರಶ್ನೆ ಕೇಳಿ ಒಂದುವರೆ ತಿಂಗಳಾಯಿತು. ಇನ್ನು ನಕ್ಷೆ ಮತ್ತು ಅಂದಾಜು ತಯಾರು ಮಾಡಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ. ಇದು ಅತಿ ಮುಖ್ಯವಾದ ಬಸ್‌ಸ್ಟ್ಯಾಂಡ್ ಇರುವುದರಿಂದ ಮತ್ತು ಗುಲ್ಬರ್ಗ ಮತ್ತು ಬಿದರ್ ರಾಯಚೂರುಗಳಿಗೆ ಸಂಪರ್ಕ ಉಂಟುಮಾಡುವುದರಿಂದ ಸೋಲಾಪುರ್ ಮತ್ತು ಮುಖ್ಯವಾದ ಸ್ಥಳಗಳಿಗೆ ಹೋಗುವವರಿಗೆ ಇದು ಬಹಳ ಮುಖ್ಯವಾದ ಮಧ್ಯವರ್ತಿ ಸ್ಥಳವಾಗಿರುವುದರಿಂದ ಇಲ್ಲಿ ಶೀಘ್ರವಾಗಿ ಬಸ್‌ಸ್ಟ್ಯಾಂಡ್ ಏರ್ಪಾಡು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಇಲ್ಲಿ ಇರುವುದು 5 ಸಾವಿರ ಜನಸಂಖ್ಯೆ, ಬಸ್‌ಸ್ಟ್ಯಾಂಡ್ ಹೇಗೆ ಕೊಡುವುದಕ್ಕೆ ಆಗುತ್ತದೆ ? ಅಲ್ಲಿ ಬಸ್ ಷೆಲ್ಟರ್ ಕಟ್ಟಿಕೊಡಬಹುದು.

ಶ್ರೀ ಜೆ. ಎಲ್. ಕಬಾಡಿ.—ಇಲ್ಲಿಗೆ ಬರುವ ಮತ್ತು ಹೋಗುವ ಜನರ ಸಂಪರ್ಕ ಜಾಸ್ತಿ ಇರುತ್ತದೆ. ಇದು ಸಿಂದಗಿ, ಗುಲ್ಬರ್ಗಾ, ರಾಯಚೂರ್ ಮತ್ತು ಸೋಲಾಪುರಕ್ಕೆ ಹೋಗುವ ಅತಿ ಮುಖ್ಯ ಕ್ರಾಸ್ ಇರುವುದರಿಂದ ಮತ್ತು ಬಿಜಾಪುರಕ್ಕೆ ಹೋಗುವ ಜನಕ್ಕೆ ಸೌಕರ್ಯ ಒದಗಿಸಿ ಕೊಡಬೇಕಾಗಿರುವುದರಿಂದ, ಇಲ್ಲಿ ಶೀಘ್ರದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಿಸಿಕೊಡುತ್ತೀರಾ ?

ಶ್ರೀ ಅಜೀಜ್ ಸೇಟ್.—ತಾವು ಹೇಳುವುದು ಎಲ್ಲಾ ಗಮನದಲ್ಲಿಟ್ಟು ಬಸ್ಸುಗಳಲ್ಲಿ ಬರುವ ಜನರ ಸೌಕರ್ಯ ನೋಡಿ ಜನಕ್ಕೆ ತೊಂದರೆ ಇಲ್ಲದ ರೀತಿಯಲ್ಲಿ ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಚಿವರು ಈ ಬಗ್ಗೆ ಒಂದು ತಿಂಗಳ ಹಿಂದೆ ತಮ್ಮ ಹೇಳಿಕೆಯಲ್ಲಿ ರಾಷ್ಟ್ರೀಕರಣವಾದಂಥ ಕೆಲವು ರೂಟ್ಸ್‌ಗಳಲ್ಲಿ ಸರಿಯಾಗಿ ಬಸ್ಸುಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ, ಆದ್ದರಿಂದ ಖಾಸಗಿ ಬಸ್ಸುಗಳನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡು ಓಡಿಸಬೇಕು ಎಂದು ಹೇಳಿದರು.

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸಂಬಂಧಪಟ್ಟ ಸಚಿವರು ಸಂಬಂಧಪಟ್ಟ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದಾರೆ, ನಾನು ಪ್ರಶ್ನೆ ಕೇಳುವುದಕ್ಕೆ ತಾವು ಅವಕಾಶಕೊಡಬೇಕು.

ಶ್ರೀ ಬಾಪೂಗೌಡ ರಾಯಪ್ಪ.—ಪ್ರಯಾಣಿಕರ ಸಂಖ್ಯೆ ಎಷ್ಟಾಗುತ್ತದೆ ಎಂಬ ಸರ್ವೆ ಮಾಡಿ ಯಾವ ಯಾವ ಜಾಗದಲ್ಲಿ ಇಂತಹ ಬಸ್ ಷೆಲ್ಟರಗಳು ಬೇಕು ಎನ್ನುವುದನ್ನು ನಿರ್ಧಾರ ಮಾಡಿದ್ದಾರೆಯೇ ?

Sri AZEEZ SAIT.—That is what I exactly stated. Requirements of buses, number of buses ಎಲ್ಲಾ ಗಮನಕ್ಕೆ ತೆಗೆದುಕೊಂಡು ಮಾಡೋಣ ಎಂದು ಅದನ್ನೇ ನಾನು ಹೇಳಿರುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಹೊಸದಾಗಿ ಕಟ್ಟುತಕ್ಕ ಬಸ್ ನಿಲ್ದಾಣದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಈಗಾಗಲೇ ಕಟ್ಟಿರುವ ಬಸ್ ಷೆಲ್ಟರುಗಳು ಅಂದರೆ, ಉದಾಹರಣೆಗೆ ತುಮಕೂರು, ಅರಸೀಕೆರೆ, ಭದ್ರಾವತಿ ಮತ್ತು ಶಿವಮೊಗ್ಗದಲ್ಲಿರುವ ಬಸ್ ನಿಲ್ದಾಣಗಳನ್ನು ಶುಚಿಯಾಗಿಡುವುದಕ್ಕೆ ಯೋಜನೆ ಇದಯೇ ?

Sri AZEEZ SAIT.—That does not arise.

ಶ್ರೀ ಎಸ್. ಮೈ. ಪಾಟೀಲ್.—ದೇವರಹಿಪ್ಪರಿಗಿಯಲ್ಲಿ ಜನಸಂಖ್ಯೆ ಹಾಲ ಕಡಿಮೆ ಇದ್ದರೂ, ಅದು ಇಡೀ ರಾಜ್ಯದ ಪ್ರಯಾಣಿಕರು ಓಡಾಡತಕ್ಕ ಸ್ಥಳವಾಗಿದೆ. ಇದು 7-8 ಕಡೆಯಿಂದ ಬರುವ ಜನಗಳು ಕ್ರಾಸ್ ಮಾಡಬೇಕಾದ ಮಧ್ಯವರ್ತಿ ಸ್ಥಳವಾದ್ದರಿಂದ ಸಾವಿರಾರು ಜನ ಪ್ರಯಾಣಿಕರು ಅಲ್ಲಿ ಮುಕ್ಕಾಮ್ ಮಾಡಿ ತೊಂದರೆಪಡುತ್ತಿದ್ದಾರೆ. ಇದನ್ನು ತಿಳಿದುಕೊಂಡು ಬಸ್ ನಿಲ್ದಾಣವನ್ನು ಮಾಡಿಸಿಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಅಜೀಜ್ ಸೇಟ್.—ಜನಸಂಖ್ಯೆ ವಿವರ, ತೊಂದರೆ, ಆರಾಮ ವಿರಾಮ, ಎಲ್ಲ ನೋಡಿ ಕೊಂಡು ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ವೈ. ಪಾಟೀರ್.—ಎಷ್ಟು ತೀವ್ರವಾಗಿ ಮಾಡಿಸಿಕೊಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಬಹು ಶೀಘ್ರದಲ್ಲೇ ಮಾಡಿಸಿಕೊಡುತ್ತೇನೆ.

MADAM SPEAKER.—Now the Question Hour is over.

Question for Answer on the Day

(but not taken up)

Scarcity of Drinking Water in some Towns of Chikodi Taluk

27. Sri J. S. AMMANNAVAR (Sadalga).—

Will the Minister for Community Development and Social Welfare be pleased to state :—

(*a*) whether the Government is aware of the acute scarcity of drinking water in Chikodi, Sadalga, Examba, Borgaon towns of Chikodi taluk ;

(*b*) if so, the steps they have taken to provide drinking water supply facility to these towns ?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) Chikodi : Water supply scheme sanctioned for Rs. 7,39,800 under "Q. Loans and Advances" in the year 1963, though completed has not become fruitful as the storage reservoir did not receive water due to failure of rains in catchment area. The question of supplying drinking water from Ghataprabha High Level Canal is being examined. To tide over the scarcity for drinking water two dug wells and 2 bore wells are under construction. It is also proposed to sink 6 additional bore wells under "64 Famine". The PHE Division, Belgaum has been permitted to construct a well near Inspection Bungalow at Chikodi and to install necessary pumpsets at a cost of Rs. 50,500. This will tide over the situation until permanent source is decided upon.

Sadalga : Waterer Supply Scheme was sanctioned for Rs. 3,76,000 during 1969. The work is under progress and it is likely to be completed early.

Examba : The scheme is sanctioned for Rs. 4,25,500 and the work is under progress.

Borgaon : Plans and estimates have been drawn up for Rs. 4,60,700 and is under scrutiny with the PHE Division, Belgaum.